# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.

ಸಿ.ಸಿ. ನಂಃ 62/2021 ಸಿಡಬ್ಲೂ: 2 ಪಿಡಬ್ಲೂ: 3

ಪ್ರಮಾಣವಚನ ಬೋಧಿಸಲಾಯಿತು ದಿಃ 21-11-2024

ಹೆಸರು : ಚನ್ನಬಸಪ್ಪ

ತಂದೆ ಹೆಸರು : ಸಾಬಣ್ಣ

ವಯಸ್ಸು : 57 ವರ್ಷ

ಉದ್ಯೋಗ : ಕೂಲಿ ಕೆಲಸ

ವಾಸಸ್ಥಳ : ಹೂಡಗಿ ಗ್ರಾಮ

**:ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ:**

ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ ಸದರಿ ದಾಖಲಾತಿಯು ಸ್ಥಳದ ಪಂಚನಾಮೆಯಾಗಿದ್ದು ಸಾಕ್ಷಿಯು ಅದನ್ನು ನೋಡಿ ಗುರುತಿಸಿರುವುದರಿಂದ ಅದನ್ನು ನಿಪಿ-2 ಎಂದು ಹಾಗು ಅದರಲ್ಲಿ ಇರುವ ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಮುಂದುವರೆದು ನಾನು ಸದರಿ ಪಂಚನಾಮೆಗೆ ಜಿಲಾನಿ ಹೋಟೇಲ್‌ನಲ್ಲಿ ಸಹಿ ಮಾಡಿರುತ್ತೇನೆ. ಪೊಲೀಸರು ನನ್ನನ್ನು ಪಂಚನಾಮೆಗೆ ಕರೆಯಿಸಿದರು. ಪೊಲೀಸರು ಪಂಚನಾಮೆಯ ಅವಧಿಯಲ್ಲಿ ಯಾವುದೇ ವಸ್ತುವನ್ನು ವಶಕ್ಕೆ ಪಡೆದುಕೊಂಡಿಲ್ಲ. ಸಾಕ್ಷಿಯು ಮುಂದುವರೆದು ಅಲ್ಲಿಯೇ ಒಂದು ಬಡಿಗೆ ಬಿದಿತ್ತು ಎಂದು ನುಡಿಯುತ್ತಾರೆ. ಸಾಕ್ಷಿಗೆ ಒಂದು ಬಡಿಗೆಯನ್ನು ತೋರಿಸಲಾಗಿ ಅದನ್ನು ನೋಡಿ ಗುರುತಿಸಲು ನಿರಾಕರಿಸಿರುತ್ತಾರೆ. ಸುಮಾರು 3 ವರ್ಷಗಳ ಹಿಂದೆ ಮಧ್ಯಾಹ್ನ 03-00 ಗಂಟೆಯಿಂದ 04-30 ಗಂಟೆಯ ವರೆಗೆ ಪಂಚನಾಮೆಯನ್ನು ಮಾಡಿರುತ್ತಾರೆ. ನನಗೆ ದಿನಾಂಕ ಹೇಳಲು ಬರುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ವಾಟೀಸವಾಲಿಗೆ ಅನುಮತಿ ಕೋರಿರುತ್ತಾರೆ, ಅನುಮತಿ ನೀಡಲಾಯಿತು)**

**ವಾಟೀಸವಾಲುಃ** ಮಾನ್ಯ ಸ.ಸ.ಅ ರವರಿಂದ:

ದಿ. 17-11-2020 ರಂದು ಪೋಲೀಸರು ಪಂಚನಾಮೆಯ ಅವಧಿಯಲ್ಲಿ ಒಂದು ಬಡಿಗೆಯನ್ನು ವಶಕ್ಕೆ ಪಡಿಸಿಕೊಂಡಿರುತ್ತಾರೆ ಎಂದರೆ ಸರಿ. ಸಾಕ್ಷಿಗೆ ಒಂದು ಬಡಿಗೆಯನ್ನು ತೋರಿಸಲಾಗಿ ಪೊಲೀಸರು ಇದೆ ಬಡಿಗೆ ವಶಕ್ಕೆ ಪಡೆದುಕೊಂಡಿರುತ್ತಾರೆ ಎಂದರೆ ಸರಿ. ಸದರಿ ಬಡಿಗೆಯನ್ನು ಮು ಮಾ -1 ಎಂದು ಗುರುತಿಸಲಾಯಿತು.

**ಪಾಟೀಸವಾಲುಃ** ಆರೋಪಿ ಪರ ಶ್ರೀ ಎಚ್ ಎಲ್ ಎ ವಕೀಲರಿಂದ ಃ

ಘಟನಾ ಸ್ಥಳದಲ ಸರ್ವೆ ನಂಬರನಲ್ಲಿ ನನ್ನ ಮನೆ ಕೂಡ ಬರುತ್ತದೆ ಎಂದರೆ ಸರಿ. ಅಲ್ಲಿ ಸುಮಾರು ಮೂರು ಮನೆಗಳು ಇವೆ. ನನ್ನ ಮನೆ ಸರ್ಕಾರಿ ಜಮೀನಿನಲ್ಲಿ ಇರುತ್ತದೆ. ಜಗಳ ಆಗಿರುವ ಹೋಟೇಲ್ ಕೂಡ ಅದೇ ಸರ್ವೆ ನಂಬರಿನಲ್ಲಿ ಇದೆ. ಸದರಿ ಜಮೀನು ಯಾರಿಗೂ ಮಾರಾಟ ಮಾಡಲು ಹಾಗೂ ಖರೀದಿಸಲು ಬರುವುದಿಲ್ಲ ಎಂದರೆ ಸರಿ. ನಾನು ನಮ್ಮ ಮನೆ ಪಂಚಯತಿಯಿಂದ ಪರವಾನಗಿ ಪಡೆದುಕೊಂಡು ಕಟ್ಟಿರುತ್ತೇನೆ. ಆರೋಪಿತರು ನಾನು ಕಟ್ಟಿದ ಮನೆ ತಪ್ಪಾಗಿ ಕಟ್ಟಿರುತ್ತೇನೆ ಎಂದು ಕೇಳಿರುತ್ತಾರೆ ಎಂದರೆ ಸರಿ. ಅದೇ ಒಂದು ದ್ವೇಷ ಮನಸ್ಸಿ ನಲ್ಲಿ ಇಟ್ಟು ಕೊಂಡು ಆರೋಪಿತರ ವಿರುದ್ದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಿಲ್ಲ. ಸಾಕ್ಷಿಗೆ ಮೂ ಮಾ -1 ನ್ನು ತೋರಿಸಲಾಗಿ ಸಾಕ್ಷಿಯು ವಶಕ್ಕೆ ಪಡೆದಿರುವ ಬಡಿಗೆ ಇದೇ ತರಹದ ಸ್ವಲ್ಪ ದಪ್ಪನ ಬಡಿಗೆ ಇರುತ್ತದೆ. ಪಂಚನಾಮೆ ಮಾಡಿರುವ ಬಗ್ಗೆ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನ ಎಂದರೆ ಸರಿಯಿಲ್ಲ. ಪೊಲೀಸರು ನನ್ನನ್ನು ಕರೆಯಿಸಿ ಸಹಿ ಮಾಡಲು ತಿಳಿಸಿದ್ದರುತ್ತಾರೆ ಅದರಿಂದ ನಾನು ಸಹಿ ಹಾಕಿರುತ್ತೇನೆ. ಆರೋಪಿತರು ಹೊಡೆದಿರುವುದರಿಂದ ಹಲ್ಲು ಮುರಿದಿರುವುದರಿಂದ ರಕ್ತ ಬರುತ್ತಿತು ಎಂದು ನುಡಿಯುತ್ತಾರೆ.

ಮರುವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ. ಇದೆ.**

**ಪ್ರ. ದ. ನ್ಯಾ. ದಂ. ಸೇಡಂ.**